## ನಿಮಗೆಷ್ಟು ಗೊತ್ತು

# ಬಿಷಪ್ ಹಕ್ಕಿ

ಪಕ್ಷಿಗಳಲ್ಲಿ ಅಪರೂಪ ಎನ್ನಬಹುದಾದ ಬಹು ಸಂಗಾತಿಗಳನ್ನು ಹೊಂದುವ ಸ್ವಭಾವದಿಂದಾಗಿ ಬಿಷಪ್ ಪಕ್ಷಿಯು ಉಳಿದ ಹಕ್ಕಿಗಳಿಗಿಂತ ಭಿನ್ನವಾಗಿದೆ. ಗಾತ್ರದಲ್ಲಿ ಬಹಳ ಪುಟ್ಟದಾಗಿದ್ದು 13 ಸೆಂ.ಮೀ.ಗಳಷ್ಟು ಉದ್ದವಿರುತ್ತದೆ. ಸಾಮಾನ್ಯವಾಗಿ ಆಫ್ರಿಕಾದ ಉಷ್ಣ ಹಾಗೂ ಸಮಶೀತೋಷ್ಣ ವಲಯಗಳ ಕಾಡುಗಳಲ್ಲಿ ಹಾಗೂ ಹುಲ್ಲಿನ ಮೈದಾನಗಳಲ್ಲಿ ಕಂಡು ಬರುತ್ತದೆ.

ಹೊಳೆಯುವ ಹಳದಿ ಮತ್ತು ಕೆಂಪು ಬಣ್ಣದ ಪುಚ್ಛಗಳನ್ನು ಹೊಂದಿರುವ ಈ ಬಿಷಪ್ ಹಕ್ಕಿ ಮರದ ಪೊಟರೆಗಳಲ್ಲಿ ಗೂಡು ಕಟ್ಟುತ್ತದೆ. ಚೂಪಾದ ಮುಳ್ಳು, ರೆಂಬೆ, ಹುಲ್ಲಿನ ಸಹಾಯದಿಂದ ಘಂಟೆಯ ಆಕೃತಿಯಲ್ಲಿ ದೃಢವಾದ ಗೂಡನ್ನು ಕಟ್ಟುತ್ತದೆ. ನಾವು ಬಟ್ಟೆ ಹಾಗೂ ಕಂಬಳಿಗಳನ್ನು ನೇಯುವಂತೆ ಕೊಕ್ಕಿನ ಸಹಾಯದಿಂದ ಹುಲ್ಲಿನ ತುದಿಯನ್ನು



ಒಂದಕ್ಕೊಂದು ಗಂಟು ಹಾಕುತ್ತ ಕಲಾತ್ಮಕವಾಗಿ ಗೂಡು ಕಟ್ಟುತ್ತದೆ. ಬಹಳ ಎತ್ತರವಾದ ಮರದ ಮೇಲೆ ಗೂಡು ಕಟ್ಟುವುದು ಇವುಗಳ ರೂಢಿ. ಜೊತೆಗೆ ಮೊಟ್ಟೆಗಳ ರಕ್ಷಣೆಗೆಂದು ನೀರಿನ ಮೇಲೆ ಚಾಚಿಕೊಂಡಿರುವ ಮರದ ರೆಂಬೆಗಳ ಮೇಲೆ ಗೂಡು ಕಟ್ಟುತ್ತದೆ.

ಒಮ್ಮೆ 2–7 ಮೊಟ್ಟೆಗಳನ್ನಿಡುವ ಈ ಪಕ್ಷಿಯು 20 ದಿನಗಳವರೆಗೆ ಕಾವು ಕೊಡುತ್ತದೆ. ಆದರೆ ಸಂಗಾತಿಗಳನ್ನು ಬದಲಿಸುವುದು ಇದರ ಸ್ವಭಾವ. ಬೇರೆ ಹಕ್ಕಿಗಳು ದೀರ್ಘಕಾಲ ಒಂದೇ ಸಂಗಾತಿಯ ಜೊತೆ ಬಾಳ್ವೆ ಮಾಡಿದರೆ ಈ ಹಕ್ಕಿ ಚಂಚಲ ಸ್ವಭಾವದ್ದು.

**-ರಾಮಪ್ರಸಾದ ಬಿ.**
**ಹೊಸಪೇಟೆ**

# ಜಾಣ ಪುಟ್ಟ



ಪುಟ್ಟನಮ್ಮನೊಂದು ಬಾರಿ
ಹಿಟ್ಟು ಕಲಸಿ ಒಣಗಲೆಂದು
ರೊಟ್ಟಿ ತಟ್ಟಿ ಬಿಸಿಲಿಗಿಟ್ಟು ಪುಟ್ಟನೊಡನೆ ಅಂದಳು
ಪುಟ್ಟ ನೋಡು ಬಿಸಿಲಿಗಿಟ್ಟ
ರೊಟ್ಟಿಗಳನು ನೋಡಿಕೊಳ್ಳೊ
ಕೆಟ್ಟ ಕಾಗೆ ಅದನು ಬಂದು ಮುಟ್ಟಬಾರದು

ಪುಟ್ಟನಾಗ ಹೊರಗೆ ಆಟ
ಬಿಟ್ಟು ಅಲ್ಲೆ ಕುಳಿತುಕೊಂಡು
ದಿಟ್ಟಿಯಿಟ್ಟು ಬಂದ ಕಾಗೆ ನೋಡುತ್ತಿದ್ದನು
ತಟ್ಟಿ ಇಟ್ಟ ರೊಟ್ಟಿಯನ್ನು
ಪುಟ್ಟ ಕಾಗೆ ಮರಿಯು ಆಗ
ಗಟ್ಟಿಯಾಗಿ ಕಚ್ಚಿಕೊಂಡು ಹಾರಿ ಹೋಯಿತು

ಅಲ್ಲಿಗಾಗ ಅಮ್ಮ ಬಂದು
ಮೆಲ್ಲ ಎರಡು ಏಟು ಕೊಟ್ಟು
ಗಲ್ಲ ಹಿಡಿದು ಪುಟ್ಟನನ್ನು ಕೇಳಿಬಿಟ್ಟಳು
ನಿಲ್ಲು ಪುಟ್ಟ ಏಕೆ ನೀನು
ಇಲ್ಲಿ ಬಂದ ಕಾಗೆಯನ್ನು
ಕಲ್ಲು ತೂರಿ ಬಾರದಂತೆ ತಡೆಯಲಿಲ್ಲವೊ

ಪುಟ್ಟನಾಗ ಅಮ್ಮನೆದುರು
ಬಿಟ್ಟ ಬಾಯಿಯನ್ನು ಮೆಲ್ಲ
ಕೆಟ್ಟ ಕಾಗೆ ಬಂದುದಲ್ಲವೆಂದು ನುಡಿದನು
ದಿಟ್ಟಿಯಿಟ್ಟು ನೋಡುತಿದ್ದೆ
ಪುಟ್ಟ ಕಾಗೆ ಮರಿಯಲ್ಲೇನೂ
ಕೆಟ್ಟದನ್ನು ಕಾಣಲಿಲ್ಲ ತನಗೆಯೆಂದನು

ಹೊಟ್ಟೆಪಾಡಿಗಾಗಿ ಕಾಗೆ
ರೊಟ್ಟಿಯನ್ನು ತಿಂದ ಒಡನೆ
ಕೆಟ್ಟ ಕಾಗೆಯದುವೆ ಎಂದು ಹೇಗೆ ಹೇಳುವೆ?
ಹೊಟ್ಟೆ ತುಂಬ ತಿಂದ ನಾವು
ಬಿಟ್ಟಿಯಾಗಿ ಸಿಗಲು ಇನ್ನು
ಬುಟ್ಟಿತುಂಬ ಕಟ್ಟಿಕೊಂಡು ಹೋಗದಿರುವೆವೆ?

ಬಿಸಿಲಿಗಿಟ್ಟ ಚೂರು ರೊಟ್ಟಿ
ಹಸಿದ ಕಾಗೆ ತಿಂದು ಬಿಡಲು
ಕಸಿದುಕೊಂಡಿತೆಂದು ಅದನು ದೂರಿಬಿಟ್ಟರೆ
ಕೆಸರು ಕೈಗೆ ಮಾಡಿಕೊಳದೆ
ಮೊಸರು ತಿನ್ನಲೆಣಿಪ ನಾವು
ಹಸಿದ ಕಾಗೆಗಿಂತ ತುಂಬ ದುಷ್ಟರಲ್ಲವೇ?

ಅಮ್ಮನಾಗ ಇದನು ಕೇಳಿ
ಭಿಮ್ಮನವನ ಸೆಳೆದುಕೊಂಡು
ಹೆಮ್ಮೆಯಿಂದ ತನ್ನ ಮೈಗೆ ಅಪ್ಪಿಕೊಂಡಳು
ನಮ್ಮ ಪುಟ್ಟ ನಿಜಕೂ ಜಾಣ
ಸುಮ್ಮನವನ ಬೈದೆನೆಂದು
ಉಮ್ಮ ಕೊಡುತ ಅಲ್ಲೆ ಅವನನೆತ್ತಿಕೊಂಡಳು

**-ಕಿಗ್ಗಾಲು ಗಿರೀಶ್, ಮೂರ್ನಾಡು**